# ಕಿತ್ತೂರು ರಾಣಿ ಚನ್ನಮ್ಮ ಬಾಲಕಿಯರ ಸೈನಿಕ ವಸತಿ ಶಾಲೆ, ಕಿತ್ತೂರು – 591 115

ಜಿಲ್ಲಾ : ಬೆಳಗಾವಿ, ರಾಜ್ಯ : ಕರ್ನಾಟಕ (ಭಾರತ)

[ಐ.ಪಿ.ಎಸ್.ಸಿ. ಸದಸ್ಯತ್ವ ಹಾಗೂ ಕೇಂದ್ರೀಯ ಮಾಧ್ಯಮಿಕ ಶಿಕ್ಷಣ ಮಂಡಳಿ ದೆಹಲಿಯಿಂದ ಸಂಯೋಜಿತ]

ಸಿ.ಬಿ.ಎಸ್.ಇ. ಸದಸ್ಯತ್ವ ಸಂಖ್ಯೆ: 830488, ಶಾಲಾ ಕೋಡ್: 45438

ದೂರವಾಣಿ : 08288-234608, ಜಂಗಮವಾಣಿ : 8123409432, ಮಿಂಚಂಚೆ : kittursainikschool@gmail.com
admseckrc@gmail.com, ಜಾಲತಾಣ : www.kittursainikschool.org



"ಜವಾಬ್ದಾರಿಯುತ ಹಾಗೂ ಸಮರ್ಪಿತ ಪ್ರಜೆಗಳನ್ನು ಸಿದ್ಧಪಡಿಸುವ ಭದ್ರ ಬುನಾದಿ"

## ಪ್ರವೇಶ ಪ್ರಕಟಣೆ 2024–2025

## 6ನೆಯ ವರ್ಗಕ್ಕಾಗಿ ಅಖಿಲ ಭಾರತ ಪ್ರವೇಶ ಪರೀಕ್ಷೆ



**ಧ್ಯೇಯೋದ್ದೇಶ :** ಕಿತ್ತೂರ ರಾಣಿ ಚನ್ನಮ್ಮ ಬಾಲಕಿಯರ ಸೈನಿಕ ವಸತಿ ಶಾಲೆಯು ಬಾಲಕಿಯರಿಗಾಗಿಯೇ ಇರುವ ಭಾರತದ ಏಕಮೇವ ಪಬ್ಲಿಕ್ ಶಾಲೆಯಾಗಿದ್ದು ಸೈನಿಕ ತರಬೇತಿ ನೀಡಿ ಸಧೃಡ ಭಾರತದ ನಿರ್ಮಾಣ ಹಾಗೂ ರಾಷ್ಟ್ರಪ್ರೇಮವನ್ನು ಹುಟ್ಟು ಹಾಕುವಂತಹ ಗುರಿ ಹೊಂದಲಾಗಿದೆ. **ಪಠ್ಯಕ್ರಮ:** 10+2 ಸಿ.ಬಿ.ಎಸ್.ಇ. ಪಠ್ಯಕ್ರಮ [ವಿಜ್ಞಾನ ವಿಭಾಗ]. ಶೈಕ್ಷಣಿಕ ವರ್ಷ 2024–25ನೆಯ ಸಾಲಿಗೆ 6ನೆಯ ವರ್ಗದ ಪ್ರವೇಶ ಪರೀಕ್ಷೆಗಾಗಿ ಅರ್ಜಿಗಳನ್ನು ಕರೆಯಲಾಗಿದ್ದು ಅಖಿಲ ಭಾರತ ಪ್ರವೇಶ ಪರೀಕ್ಷೆಯು ಲಿಖಿತ, ದೇಹದಾರ್ಢ್ಯತೆ, ವೈದ್ಯಕೀಯ ಹಾಗೂ ಮೌಖಿಕ ಸಂದರ್ಶನ ಪರೀಕ್ಷೆಗಳನ್ನು ಒಳಗೊಂಡಿರುತ್ತದೆ.

| | |
|---|---|
| **ಪರೀಕ್ಷಾ ದಿನಾಂಕ** | **28ನೆಯ ಜನವರಿ 2024, ಪರೀಕ್ಷಾ ವಿಧಾನ:** ಪೆನ್ ಮತ್ತು ಪೇಪರ್ ಮಾದರಿ, **ಮಾಧ್ಯಮ:** ಇಂಗ್ಲಿಷ್ ಅಥವಾ ಕನ್ನಡ |
| **ಪರೀಕ್ಷಾ ಕೇಂದ್ರಗಳು** | ಕಿತ್ತೂರ, ವಿಜಯಪುರ, ಬೆಂಗಳೂರು, ಕಲಬುರಗಿ [ಕರ್ನಾಟಕದಲ್ಲಿ ಮಾತ್ರ] |
| **ವಯೋಮಿತಿ** | ಜೂನ್ 1, 2012 ಮತ್ತು ಮೇ 31, 2014ರ ನಡುವೆ ಜನಿಸಿದ 5ನೆಯ ವರ್ಗದಲ್ಲಿ ವ್ಯಾಸಂಗ ಮಾಡುತ್ತಿರುವ ಬಾಲಕಿಯರು ಮಾತ್ರ ಪ್ರವೇಶ ಪರೀಕ್ಷೆಗೆ ಅರ್ಹರಾಗಿರುತ್ತಾರೆ. |
| **ಪರೀಕ್ಷಾ ಶುಲ್ಕ** | ರೂ.2000/–ಸಾಮಾನ್ಯ ವ ಇತರೆ ಅಭ್ಯರ್ಥಿಗಳಿಗೆ(ಕರ್ನಾಟಕ ಮತ್ತು ಹೊರ ರಾಜ್ಯದವರಿಗೆ), ರೂ.1,600/–ಪಜಾ/ಪಪಂ ಅಭ್ಯರ್ಥಿಗಳಿಗೆ (ಕರ್ನಾಟಕದ ರಹವಾಸಿಗಳು. ಇತ್ತೀಚಿನ ಅಧಿಕೃತ ಜಾತಿ ಪ್ರಮಾಣ ಪತ್ರದ ನಕಲು ಪ್ರತಿಯನ್ನು ಲಗತ್ತಿಸಬೇಕು) |
| **ಶುಲ್ಕ ವಿವರ** | ರೂ. 2,13,500/–(ಊಟ, ವಸತಿ, ಸಮವಸ್ತ್ರ ಮತ್ತು ಇತರೆ ಶೇವಣಿಗಳು ಸೇರಿ) ಶೈಕ್ಷಣಿಕ ಸಾಮಗ್ರಿ ಮತ್ತು ಇತರೆ ಶುಲ್ಕ ಹೊರತುಪಡಿಸಿ. |
| **ಮೀಸಲಾತಿ** | ಕರ್ನಾಟಕ ಸರ್ಕಾರದ ಆದೇಶದ ಪ್ರಕಾರ ತಲಾ ಎರಡು ಸ್ಥಾನಗಳನ್ನು ಕಿತ್ತೂರು ಹೋಬಳಿ ಮತ್ತು ರಕ್ಷಣಾ ಸಿಬ್ಬಂದಿ ವರ್ಗದ ಅಭ್ಯರ್ಥಿಗಳಿಗೆ ಕಾಯ್ದಿರಿಸಲಾಗಿದೆ. ರಾಷ್ಟ್ರೀಯ ಶೌರ್ಯ ಪ್ರಶಸ್ತಿ ವಿಜೇತ ಬಾಲಕಿಯರಿಗೆ ಗರಿಷ್ಠ ಮೂರು ಸ್ಥಾನಗಳವರೆಗೆ ಮೀಸಲಾತಿ ಲಭ್ಯವಿದೆ. (ಪ್ರಮಾಣ ಪತ್ರದ ಧೃಢೀಕೃತ ನಕಲು ಪ್ರತಿಯನ್ನು ಲಗತ್ತಿಸಬೇಕು). |
| **ವಿದ್ಯಾರ್ಥಿ ವೇತನ** | ಕರ್ನಾಟಕ ಸರ್ಕಾರದ ವಿದ್ಯಾರ್ಥಿವೇತನ ಯೋಜನೆಯು, ಕರ್ನಾಟಕ ರಾಜ್ಯದ ರಹವಾಸಿ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯವಾಗುತ್ತದೆ. ಈ ಯೋಜನೆಯ ಅಡಿಯಲ್ಲಿ ಪ್ರವೇಶ ಪಡೆದಂತ ಅಭ್ಯರ್ಥಿಗಳು ತಮ್ಮ ಶಿಕ್ಷಣವನ್ನು ಇದೇ ಸಂಸ್ಥೆಯಲ್ಲಿ 12ನೆಯು ತರಗತಿಯುವರೆಗೆ ವಿಜ್ಞಾನ ವಿಭಾಗದಲ್ಲಿ ಮುಂದುವರೆಸಬೇಕಾಗುತ್ತದೆ. ವಿಫಲರಾದಲ್ಲಿ ಕರ್ನಾಟಕ ಸರ್ಕಾರದಿಂದ ಪಡೆದಂಥ ವಿದ್ಯಾರ್ಥಿವೇತನವನ್ನು ಸಂಪೂರ್ಣವಾಗಿ ಭರಿಸಬೇಕಾಗುತ್ತದೆ. |
| **ಮೌಖಿಕ ಸಂದರ್ಶನ** | ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಪ್ರತಿಭಾ ಆಧಾರದಲ್ಲಿ ಸಂದರ್ಶನಕ್ಕೆ ಕರೆಯಲಾಗುವದು. ಸಂದರ್ಶನವನ್ನು ಕಿತ್ತೂರು ಕೇಂದ್ರದಲ್ಲಿ ನಡೆಸಲಾಗುವುದು. ಸಂದರ್ಶನವು ಈ ಕೆಳಗಿನ ಅಂಶಗಳನ್ನು ಒಳಗೊಂಡಿರುತ್ತದೆ. [ಅ] ದೇಹದಾರ್ಢ್ಯತೆ, [ಬ] ವೈದ್ಯಕೀಯ ಪರೀಕ್ಷೆ, [ಕ] ಮೌಖಿಕ ಸಂದರ್ಶನ. ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳಿಗೆ ಮೌಖಿಕ ಸಂದರ್ಶನದಲ್ಲಿ ಗಳಿಸಿದ ಅಂಕಗಳನ್ನು ಸೇರಿಸುವ ಮೂಲಕ ಅರ್ಹರಾದ ಅಭ್ಯರ್ಥಿಗಳನ್ನು ಆಯ್ಕೆಮಾಡಲಾಗುವದು. |

### ವಿವರಣಾ ಪುಸ್ತಕದ ಹಾಗೂ ಅರ್ಜಿಫಾರ್ಮಗಳ ಮಾರಾಟ (ಆನ್‌ಲೈನ್ ಹಣ ಪಾವತಿಯಿಂದ)

| | |
|---|---|
| ದಂಡ ರಹಿತ | **ಅಕ್ಟೋಬರ್ 30, 2023 ರಿಂದ ಡಿಸೆಂಬರ್ 15, 2023.**<br>(ರೂ. 2000/– ಸಾಮಾನ್ಯ ಅಭ್ಯರ್ಥಿಗಳು/ಓ.ಬಿ.ಸಿ, ಕರ್ನಾಟಕ ಹಾಗೂ ಹೊರ ರಾಜ್ಯದವರಿಗೆ.<br>1600/– ಪ.ಜಾ/ಪ.ಪಂ. ದವರಿಗೆ. ಅವರು ಕರ್ನಾಟಕ ನಿವಾಸಿಯಾಗಿರಬೇಕು)<br>**ಭರ್ತಿಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: ಡಿಸೆಂಬರ್ 20, 2023** |
| ದಂಡ ಸಹಿತ | **ಡಿಸೆಂಬರ್ 16, 2023 ರಿಂದ ಡಿಸೆಂಬರ್ 30, 2023.**<br>(ರೂ. 2,500/– ಸಾಮಾನ್ಯ ಅಭ್ಯರ್ಥಿಗಳು/ಓ.ಬಿ.ಸಿ, ಕರ್ನಾಟಕ ಹಾಗೂ ಹೊರ ರಾಜ್ಯದವರಿಗೆ.<br>2,100/– ಪ.ಜಾ/ಪ.ಪಂ. ದವರಿಗೆ. ಅವರು ಕರ್ನಾಟಕ ನಿವಾಸಿಯಾಗಿರಬೇಕು)<br>**ಭರ್ತಿಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: ಜನವರಿ 05, 2024** |

ಸೂಚನೆ : ಆನ್‌ಲೈನ್ ಹಣ ಪಾವತಿಯನ್ನು ಜಾಲತಾಣ: www.kittursainikschool.org ಮುಖಾಂತರ ಮಾಡಬೇಕು. ಇದೇ ಜಾಲತಾಣದಿಂದಲೂ ವಿವರಣಾ ಪುಸ್ತಕ ಹಾಗೂ ಅರ್ಜಿಪಾರ್ಮಗಳನ್ನು ಪಡೆಯಬಹುದು.

**ಪೂರ್ಣ ಪ್ರಮಾಣ ಶುಲ್ಕ ಪಾವತಿ ಪ್ರವೇಶ ಯೋಜನೆ :** ಅಭ್ಯರ್ಥಿಗಳ ಅರ್ಹತೆ (ಲಿಖಿತ ಪರೀಕ್ಷೆ+ಸಂದರ್ಶನ)ಯು ಸಾಧಾರಣ ಪ್ರತಿಭಾ ಮಟ್ಟದ್ದಾಗಿದ್ದಲ್ಲಿ ಸೀಟುಗಳು ಲಭ್ಯವಿದ್ದ ಸಂದರ್ಭದಲ್ಲಿ ಪೂರ್ಣ ಪ್ರಮಾಣದ ಶುಲ್ಕ ಭರಿಸಿ ಪ್ರವೇಶ ಪಡೆಯಬಹುದು. ಇಂಥ ಸ್ಥಳ ಕಾಯ್ದಿಡುವಿಕೆಗೆ ಪಾಲಕರು ತಮ್ಮ ಇಚ್ಛೆಯನ್ನು ಅರ್ಜಿಫಾರ್ಮಗಳಲ್ಲಿ ನಮೂದಿಸುವುದು.

**ಪ್ರಮುಖ ಅಂಶಗಳು:** ಧಾರವಾಡದ ಹಂಚಿನಮನಿ ಸಂಸ್ಥೆಯೊಂದಿಗೆ ಶೈಕ್ಷಣಿಕ ಪಾಲುದಾರಿಕೆಯ ಅಡಿಯಲ್ಲಿ ಜೆ.ಇ.ಇ.(ಪ್ರಧಾನ)/ ಎ.ಐ.ಪಿ.ಎಮ್.ಟಿ./ಸಿ.ಇ.ಟಿ/ಎನ್.ಇ.ಇ.ಟಿ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ತಜ್ಞರಿಂದ ವಿಶೇಷ ತರಬೇತಿ ತರಗತಿಗಳನ್ನು ನಡೆಸಲಾಗುವುದು, [ಕ] ಎನ್.ಸಿ.ಸಿ. ತರಬೇತಿ, [ಡ] ವಿದ್ಯಾರ್ಥಿನಿಗಳಿಗೆ ಗೈಡ್ಸ್ ತರಬೇತಿ. [ಈ] ಕುದುರೆ ಸವಾರಿ, ಈಜು ತರಬೇತಿ ಅಲ್ಲದೆ ಯೋಗ ಹಾಗೂ ಧ್ಯಾನ/ಪ್ರಾರ್ಥನೆಗಳನ್ನು ಒಳಗೊಂಡಿದೆ, [ಎಫ್] ಎನ್.ಡಿ. ಎ. ತರಬೇತಿ.

**ಸೂಚನೆಗಳು:** ■ ಪರೀಕ್ಷಾ ಮಾದರಿ, ಪ್ರವೇಶ ಮಾನದಂಡ ಮತ್ತು ಪ್ರಶ್ನೆ ಪತ್ರಿಕೆಗಳ ವಸುತಾತ್ಪರ್ಯವನ್ನು ಬದಲಿಸುವ ಹಕ್ಕನ್ನು ಶಾಲಾ ಆಡಳಿತ ಮಂಡಳಿಯು ಹೊಂದಿದೆ ■ ಪ್ರವೇಶ ಪತ್ರಗಳನ್ನು ಸಾಮಾನ್ಯ ಅಂಚೆ ಮುಖಾಂತರ ಕಳುಹಿಸಲಾಗುವದು. ■ ವಿವರಣಪುಸ್ತಕ, ಪ್ರವೇಶಪತ್ರ ಹಾಗೂ ಫಲಿತಾಂಶ ಅಂಚೆಮೂಲಕ ತಲುಪದೇ ಇದ್ದಲ್ಲಿ ಅಥವಾ ವಿಳಂಬವಾದಲ್ಲಿ ಶಾಲೆ ಜವಾಬ್ದಾರಿಯಾಗಿರುವುದಿಲ್ಲ. ■ ಭರ್ತಿಮಾಡಿದ ಅರ್ಜಿಫಾರ್ಮಗಳ ಜೊತೆ ಸ್ವ–ವಿಳಾಸ ಹೊಂದಿದ ರೂ. 5/– ಸ್ಟಾಂಪ್ ಲಗತ್ತಿಸಿದ ಲಕೋಟೆಯನ್ನು ಕಳುಹಿಸತಕ್ಕದ್ದು. ■ ಕಿತ್ತೂರ ಹೋಬಳಿ ಹಾಗೂ ರಕ್ಷಣಾ ಸೇವಾ ಸಿಬ್ಬಂದಿ ಮೀಸಲಾತಿ ಬಯಸುವವರು ಸಂಬಂಧಪಟ್ಟ ದಾಖಲಾತಿಗಳನ್ನು ಸಲ್ಲಿಸತಕ್ಕದ್ದು. ■ ಒಮ್ಮೆ ಸಂದಾಯಿಸಿದ ಶುಲ್ಕವನ್ನು ಯಾವುದೇ ಸಂದರ್ಭದಲ್ಲಿ ಮರು ಪಾವತಿಸುವುದಿಲ್ಲ ■ ಇತ್ತೀಚಿನ ಜಾತಿ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು ■ ಸುಳ್ಳು ವರಮಾನ ಮತ್ತು ಜಾತಿ ಪ್ರಮಾಣಪತ್ರಗಳನ್ನು ಸಲ್ಲಿಸಕೂಡದು.

**ಕಛೇರಿ ಅವಧಿ: ಮಂಗಳವಾರದಿಂದ ಶನಿವಾರದವರೆಗೆ ಮುಂ. 9–00 ರಿಂದ ಮ. 1–30 ವ, ಮ. 3–00 ರಿಂದ ಸಾ. 5–30ಗಂ. ಹಾಗೂ ಸೋಮವಾರ ಮುಂಜಾನೆ 9–30ರಿಂದ ಮಧ್ಯಾಹ್ನ 1–30 ಗಂಟೆಯವರೆಗೆ ಮಾತ್ರ.**

| | | |
|---|---|---|
| ಸಹಿ/– | ಸಹಿ/– | ಸಹಿ/– |
| ಪ್ರಾಚಾರ್ಯರು, ಕೆ.ಆರ್.ಸಿ.ಆರ್.ಎಸ್.ಎಸ್.ಜಿ. ಕಿತ್ತೂರ | ಕಾರ್ಯದರ್ಶಿಗಳು, ಕೆ.ಆರ್.ಸಿ.ಎಮ್.ಸಿ, ಕಿತ್ತೂರ | ಚೇರ್‌ಮನ್‌ರು, ಕೆ.ಆರ್.ಸಿ.ಎಮ್.ಸಿ, ಕಿತ್ತೂರ |